ದಿನಾಂಕಃ 28.08.2023
ಓ.ಎಸ್ ಃ 58/2019
ಡಿ.ಡಬ್ಲ್ಯೂ ಃ **1**

<u>ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಮುಂದುವರೆದ ಪಾಟೀ ಸವಾಲು ಃ ವಾದಿ ಪರ ವಕೀಲರಾದ ಶ್ರೀ ಎನ್.ಪಿ ರವರಿಂದ ಃ</u>**

ನನ್ನ ತಾಯಿ ಆರೋಗ್ಯವಾಗಿ ಚೆನ್ನಾಗಿದ್ದಾರೆ ಎಂದರೆ ಸರಿ. ಅವರು ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಲು ತೊಂದರೆ ಇರುವುದಿಲ್ಲ. ನನ್ನ ತಾಯಿಯ ಹೆಸರಿನಲ್ಲಿ ನೊಂದಣಿಯಾಗಿರುವ ದಾಖಲೆಗಳು ಇದೆಯ ಎಂದರೆ ಸಾಕ್ಷಿಯು ಸಿದ್ದಲಿಂಗಯ್ಯ ಅವರಿಂದ ಖರೀದಿ ಮಾಡಿದ್ದು ಕ್ರಯಪತ್ರ ಇದೆ. 2016 ರ ಪೂರ್ವದಲ್ಲಿ ನನ್ನ ತಾಯಿಗೆ ಸಂಬಂಧಪಟ್ಟಂತೆ ನೊಂದಣಿ ದಾಖಲೆ ಇದೆಯ ಎಂದರೆ ಇರುವುದಿಲ್ಲ. ನನ್ನ ತಾಯಿ ಬ್ಯಾಂಕಿನಲ್ಲಿ ಕುಟುಂಬದ ಪರವಾಗಿ ವ್ಯವಹಾರ ಮಾಡಿರುತ್ತಾರೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಲು ಯಾವುದೇ ತೊಂದರೆ ಇರುವುದಿಲ್ಲ. ನಾನು 2016 ರ ಪೂರ್ವದಲ್ಲಿ ಯಾವುದೇ ದಾಖಲೆಗಳಿಗೆ ಸಹಿ ಮಾಡಿರುವುದಿಲ್ಲ. ನಾನು 2019 ರಿಂದ ಹೌಸಿಂಗ್ ಫೈನಾನ್ಸ್ ನಲ್ಲಿ ಕೆಲಸ ಮಾಡುತ್ತೇನೆ. ಅಲ್ಲಿ ಕಚೇರಿಯ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ಸದರಿ ದಾಖಲೆಯನ್ನು ಹಾಜರು ಮಾಡಲು ತೊಂದರೆ ಇದೆಯ ಎಂದರೆ ತೊಂದರೆ ಇರುತ್ತದೆ. ಟ್ರ್ಯಾಕ್ಟರ್ ನನ್ನ ಹೆಸರಿನಲ್ಲಿ ಖರೀದಿ ಮಾಡಿದ್ದು ಅದನ್ನು ನ್ಯಾಯಾಲಯಕ್ಕೆ ಹಾಜರು ಮಾಡಲು ತೊಂದರೆ ಇರುವುದಿಲ್ಲ. ನಾನು ಮತ್ತು ನನ್ನ ತಾಯಿ ನಿಪಿ 1 ಅನ್ನು 15.06.2016 ರಂದು ಕ್ರಯದ ಕರಾರು ಪತ್ರ ವಾದಿಯ ಪರವಾಗಿ ಬರೆದು ಕೊಟ್ಟಿದ್ದು ದಾವಾ ಆಸ್ತಿಯನ್ನು 6,00,000/- ಮಾರಾಟ ಮಾಡಲು ಒಪ್ಪಿಕೊಂಡಿರುತೇವೆ ಎಂದರೆ ಸರಿಯಲ್ಲ. ನಿಪಿ 1 ಕ್ಕೆ ನಾನು ಮತ್ತು ನನ್ನ ತಾಯಿ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ 1 ಅನ್ನು ವಾದಿಯ ಪರವಾಗಿ ನಾನು ಮತ್ತು ನನ್ನ ತಾಯಿ ಬರೆದು ಕೊಟ್ಟಿದ್ದರು ಕೂಡ ವಾದಿಯ ತೊಂದರೆ ಕೊಡುವ ಉದ್ದೇಶದಿಂದ ಮತ್ತು ಹಣವನ್ನು ಲಪಟಾಯಿಸುವ ಉದ್ದೇಶದಿಂದ ಸಹಿ ಮಾಡಿರುವುದಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 1 ಅನ್ನು ಬರೆದು ಕೊಡುವ ಕಾಲಕ್ಕೆ 3,00,000/-ವನ್ನು ಮುಂಗಡ ಹಣವಾಗಿ ತೆಗೆದುಕೊಂಡು ಕ್ರಯಪತ್ರ ಬರೆದುಕೊಡಲು 3 ವರ್ಷ ಕಾಲಾವಕಾಶ ತೆಗೆದುಕೊಂಡಿರುತ್ತೇವೆ ಎಂದರೆ

ಸರಿಯಲ್ಲ. ಉಳಿಕೆ 3,00,000/-ವನ್ನು ಪಡೆದುಕೊಂಡು ಕ್ರಯಪತ್ರ ಬರೆದುಕೊಡುತ್ತೇವೆ ಎಂದು ಹೇಳಿರುತ್ತೇವೆ ಎಂದರೆ ಸರಿಯಲ್ಲ. ವಾದಿ ನಮಗೆ ನೋಟೀಸ್ ಕೊಟ್ಟಿದ್ದರೂ ಕೂಡ ಅದಕ್ಕೆ ಉತ್ತರ ನೀಡಿರುವುದಿಲ್ಲ ಎಂದರೆ ಸಾಕ್ಷಿಯು ಮೊದಲನೆ ನೋಟೀಸ್ ನಮ್ಮದು ಅಲ್ಲ ಎಂದು ಅದಕ್ಕೆ ಉತ್ತರ ನೀಡಿರುವುದಿಲ್ಲ, 2ನೇ ನೋಟೀಸ್ ಗೆ ಉತ್ತರ ನೀಡಿರುತ್ತೇವೆ ಎಂದು ನುಡಿಯುತ್ತಾರೆ. 2ನೇ ನೋಟೀಸ್ ಗೋಪಿನಾಥ್.ಪಿ ಅವರಿಂದ ಬಂದಿರುತ್ತದೆ ಅದಕ್ಕೆ ಉತ್ತರ ನೀಡಿದ್ದು ಅದನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ. ಸದರಿ ಉತ್ತರದಲ್ಲಿ ಕರಾರು ಪತ್ರ ನಾವು ಬರೆದು ಕೊಟ್ಟಿರುವುದಿಲ್ಲ ಎಂದು ತಿಳಿಸಿರುತ್ತೇನೆ. ಕರಾರು ಪತ್ರ ವಾದಿ ಸೃಷ್ಠಿಮಾಡಿರುತ್ತಾರೆ ಎಂದು ಪೋಲೀಸರಿಗೆ ದೂರು ಕೊಟ್ಟಿರುತ್ತೇನ ಎಂದರೆ ಕೊಟ್ಟಿರುವುದಿಲ್ಲ. ದೂರು ಕೊಡಲು ತೊಂದರೆ ಇರಲಿಲ್ಲ. ಕಾನೂನು ಬದ್ದವಾಗಿ ನಾನು ಮತ್ತು ನನ್ನ ತಾಯಿ ವಾದಿಯ ಪರವಾಗಿ ಕ್ರಯದ ಕಾರಾರು ಪತ್ರ ಬರೆದು ಕೊಟ್ಟ ಕಾರಣ ನಾನು ಯಾವುದೇ ದೂರನ್ನು ಕೊಟ್ಟಿರುವುದ್ಲಿ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ದಾವೆ ಇದ್ದ ಕಾರಣ ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಕಾನೂನು ಬದ್ದವಾಗಿ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ನಾನು ಮತ್ತು ನನ್ನ ತಾಯಿ ನಿಪಿ 1 ರಂತೆ ಕ್ರಯದ ಕರಾರು ಪತ್ರ ಬರೆದುಕೊಟ್ಟಿದ್ದರು ಕೂಡ ಮತ್ತು ನೋಟೀಸ್‌ಗೆ ಯಾವುದೇ ಉತ್ತರವನ್ನು ಕೊಡದೆ ಇದ್ದರೂ ಕೂಡ ನಿಪಿ 1 ಅನ್ನು ವಾದಿ ಸೃಷ್ಠಿಮಾಡಿರುತ್ತಾರೆ ಎಂದು ಮತ್ತು ನೋಟೀಸ್‌ಗೆ ಉತ್ತರ ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಚೆಕ್ಕುಬಂದಿ ತಪ್ಪು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 1ಅನ್ನು ಕಾನೂನು ಬದ್ದವಾಗಿ ವಾದಿಯ ಪರವಾಗಿ ಬರೆದುಕೊಟ್ಟಿದ್ದರು ಕೂಡ ವಾದಿಗೆ ಮೊಸ ಮಾಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮದ್ದೂರು.